<u>**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**</u>

<u>**ಹಿರೇಕೆರೂರು.**</u>

<u>**ಸಿ.ಸಿ.ನಂಬರ್‌ಃ110/2016**</u>

ಸಿಡಬ್ಲ್ಯೂಃ10

ಪಿಡಬ್ಲ್ಯೂಃ9

| | | |
|---|---|---|
| ಸಾಕ್ಷಿಯ ಹೆಸರು | : | ನಾಗೇಶ ಗೋಕರ್ಣಕರ |
| ತಂದೆಯ ಹೆಸರು | : | ವಿಶ್ವನಾಥ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ಅಕ್ಕಸಾಲಿಗ |
| ವಾಸಸ್ಥಳ | : | ಹಂಸಬಾವಿ |

ಇಂದು ದಿನಾಂಕಃ16.02.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

<u>**ಮುಖ್ಯ ವಿಚಾರಣೆಃ**</u> ಮಾನ್ಯ ಎಪಿಪಿಯವರಿಂದಃ

ಆರೋಪಿಯ ಪರಿಚಯ ನನಗೆ ಇರುವುದಿಲ್ಲ , ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ನನಗೆ ಗೊತ್ತಿರುವುದಿಲ್ಲ. ನಾನು ಯಾವುದೇ ಹಣ ಜಮೆ ಮಾಡಿರುವುದಿಲ್ಲ, ಪೋಲಿಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

<u>**ಪಾಟೀ ಸವಾಲುಃ**</u> ಮಾನ್ಯ ಎಪಿಪಿಯವರಿಂದಃ

ನನಗೆ ಕೆ ವಿ ಜಿ ಬ್ಯಾಂಕ್ ಹಂಸಬಾವಿಯಲ್ಲಿ ಖಾತೆ ಇರುತ್ತದೆ ಎಂದರೆ ಸರಿ. ಸದರಿ ಬ್ಯಾಂಕಿನ ಸಿಬ್ಬಂದಿಯಾದ ಆರೋಪಿ ದಿನಾಂಕ 27-10-2013 ರಿಂದ 01-11-2013 ರವರೆಗೆ ನಮ್ಮ ಬಳಿ ಪ್ರತಿ ದಿನ 100 ರೂ ಗಳಂತೆ ಪಿಗ್ಮಿಯನ್ನು ಕಟ್ಟಿಸಿಕೊಂಡು ಹೋಗುತ್ತಿದ್ದ ಎಂದರೆ ಸರಿಯಲ್ಲ. ನಂತರ ಆರೋಪಿ ಪಿಗ್ಮಿಯನ್ನು ಹಣವನ್ನು ಪಡೆದುಕೊಳ್ಳಲು ಬರದೇ ಇದ್ದ ಕಾರಣದಿಂದ ನಾನು ಬ್ಯಾಂಕಿನಲ್ಲಿ ಚಾಸಾ-1 ರವರ ಬಳಿ ವಿಚಾರಿಸಿದೆ ಎಂದರೆ ಸರಿಯಲ್ಲ. ನಂತರ ನಾನು ಹೇಳಿದಂತೆ ಚಾಸಾ-1 ರವರು ಆರೋಪಿಯ ಮನೆ ಬಳಿ ಹೋಗಿ ನೋಡಿದಾಗ ಅವರ ಮನೆ ಬೀಗ ಹಾಕಿದ್ದು ನಂತರ ಅಕ್ಕ ಪಕ್ಕದಲ್ಲಿ ವಿಚಾರಿಸಿದಾಗ ಆರೋಪಿ ಊರಿಗೆ ಹೋಗಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಆ ರೀತಿ ವಸೂಲು ಮಾಡಿದ ಹಣನವನ್ನು ಕಟ್ಟದೇ ಸುಮಾರು 40 ರಿಂದ 45 ಸಾವಿರ

ಹಣನವನ್ನು ಬ್ಯಾಂಕಿಗೆ ವಂಚಿಸಿ ಹಣನಮ್ನು ತನಗೆ ಉಪಯೋಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಚಾಸಾ-1 ರವರು ದೂರು ನೀಡಿದ್ದು ಸದರಿ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಪಿ ಬಿ ಎಂ ವಕೀಲರಿಂದಃ ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.